

بِسْمِ اللهِ الرَّحْمَنِ الرَّحِيمِ

# ಪ್ರಾರ್ಥನೆಯಿಂದ ಅಲ್ಲಾಹನು ಎಷ್ಟು ಸಮೀಪವಾಗುತ್ತಾನೆಂದರೆ ನಿಮ್ಮ ಪ್ರಾಣ ನಿಮ್ಮ ಸಮೀಪವಿರುವ ಹಾಗೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **29-12-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಇಂದು ಖಾದಿಯಾನಿನಲ್ಲಿ ಜಲ್ಸ ಸಾಲಾನ ಪ್ರಾರಂಭವಾಗಿದೆ. ಅಲ್ಲಿ ಜಲ್ಸದ ಮೂರುದಿನಗಳನ್ನು ಜನರು ಸುಖವಾಗಿ ಕಳೆಯುವಂತಾಗಲಿ. ಯಾವ ಉದ್ದೇಶಲಕ್ಷ್ಯ ಗಳಿಸಲು ಜಮಾಅತಿನ ನಿಷ್ಠಾವಂತ ಜನರು ಜಲ್ಸಕ್ಕೆ ಆಗಮಿಸಿರುವರೋ ಆ ಉದ್ದೇಶಲಕ್ಷ್ಯವನ್ನು ಅವರು ಗಳಿಸುವವರಾಗಲಿ. ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತಾ ಇರುವುದು ಮತ್ತು ತಮ್ಮ ಕರ್ಮಗಳ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಾ ಇರುವುದು ಆ ಉದ್ದೇಶಲಕ್ಷ್ಯವಾಗಿದೆ. ನೀವು ಪ್ರಾರ್ಥನೆಗಳನ್ನು ನಿಮ್ಮ ಸ್ವಂತ ಆವಶ್ಯಕತೆಗಳಿಗೆ ಸೀಮಿತಗೊಳಿಸಬೇಡಿರಿ. ಜಮಾಅತಿನ ಅಭಿವೃದ್ಧಿಗೋಸ್ಕರ ಸಹ ಪ್ರಾರ್ಥಿಸಿರಿ. ಜಮಾಅತಿಗೆ ಹಾನಿ ಉಂಟುಮಾಡಲು ಲೋಕದ ಯಾವುದೇ ಪ್ರದೇಶದಲ್ಲಿ ಕಾರ್ಯನಿರತರಾಗಿ ಯೋಜನೆಗಳನ್ನು ರೂಪಿಸುವ ಶತ್ರುಗಳ ವಿರುದ್ಧ ಅವರ ಯೋಜನೆಗಳನ್ನು ಮುರಿದು ಹಾಕಲು ವಿಶಿಷ್ಟವಾಗಿ ಪ್ರಾರ್ಥಿಸಿರಿ. ಅದಕ್ಕಾಗಿ ಅಲ್ಲಾಹನ ಸಹಾಯವನ್ನು ಬೇಡಿಕೊಳ್ಳಿರಿ. ಅಲ್ಲಾಹನು ಶತ್ರುಗಳ ಪ್ರತಿಯೊಂದು ಕೆಡುಕಿನಿಂದ ನಮ್ಮನ್ನು ರಕ್ಷಿಸಲಿ. ಇದಲ್ಲದೆ ಮುಸ್ಲಿಮರ ಇಂದಿನ ಸಾಮಾನ್ಯ ಸ್ಥಿತಿ, ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಹೆಸರಲ್ಲಿ ಕೆಲವು ಗುಂಪುಗಳು ಮತ್ತು ಸರಕಾರಗಳು ಮಾಡುತ್ತಿರುವ ದೌರ್ಜನ್ಯಗಳು, ಮುಸ್ಲಿಮರು ಮುಸ್ಲಿಮರ ಕತ್ತುಗಳನ್ನು ಕಡಿಯುತ್ತಿರುವುದು, ಅವರು ನಡೆಸುವ ಹತ್ಯಾಕಾಂಡ ಮೊದಲಾದವುಗಳಿಗೆ ಸಂಬಂಧಿಸಿ ಪ್ರಾರ್ಥಿಸಬೇಕಾದುದು ಸಹ ನಮ್ಮ ಕರ್ತವ್ಯ ಆಗಿದೆ. ಏಕೆಂದರೆ ಅಲ್ಲಾಹನ ಹೆಸರಿನಲ್ಲಿ ಮತ್ತು ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಿನಲ್ಲಿ ಈ ಜನರು ದೌರ್ಜನ್ಯ ಮಾಡುತ್ತಿದ್ದಾರೆ. ಅವರ ಈ ದೌರ್ಜನ್ಯಗಳ ಕಾರಣದಿಂದ ಮುಸ್ಲಿಮೇತರ ಲೋಕದಲ್ಲಿ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಆಕ್ಷೇಪಿಸಲಾಗುತ್ತಿದೆ. ಈ ಕಾರಣದಿಂದ ಅಹ್ಮದಿಯರಾದ ನಮ್ಮ ಹೃದಯಗಳು ಗಾಯಗೊಳ್ಳುತ್ತಾ ಇವೆ. ಆದುದರಿಂದ ನಾವು ಇದಕ್ಕೆ ಸಂಬಂಧಿಸಿ ಪ್ರಾರ್ಥಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಯಾವ ಉದ್ದೇಶಲಕ್ಷ್ಯ ಗಳಿಸಲಿಕ್ಕೋಸ್ಕರ ಕಳುಹಿಸಲಾಗಿದೆಯೋ ಆ ಉದ್ದೇಶಲಕ್ಷ್ಯ ಈಡೇರಲು ಸಹ ಪ್ರಾರ್ಥಿಸಿರಿ. ಮುಸ್ಲಿಮರಿಗೆ ಮಾರ್ಗದರ್ಶನ ನೀಡುವುದು ಮತ್ತು ಮುಸ್ಲಿಮೇತರರಿಗೆ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ತಿಳಿಸುವುದು, ಇಸ್ಲಾಮಿನ ಶ್ರೇಷ್ಠತೆ ಸಾಬೀತುಗೊಳಿಸಿ ಅವರನ್ನು ಇಸ್ಲಾಮಿಗೆ ತರುವುದು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯ ಕೆಳಗೆ ತರುವುದು, ಏಕದೇವ ವಿಶ್ವಾಸದಲ್ಲಿ ಅವರನ್ನು ನೆಲೆನಿಲ್ಲಿಸುವುದು ಆ ಉದ್ದೇಶಲಕ್ಷ್ಯಗಳಾಗಿವೆ. ಇದಲ್ಲದೆ ಲೋಕದ ಇಂದಿನ ಸ್ಥಿತಿಯ ಬಗ್ಗೆ ಸಹ ಪ್ರಾರ್ಥಿಸಿರಿ. ಅಲ್ಲಾಹನು ಎಲ್ಲಾ ಮನುಷ್ಯರಿಗೆ ವಿವೇಕ ನೀಡಲಿ. ಮತ್ತು ಅವರು ವಿನಾಶದ ಹೊಂಡಕ್ಕೆ ಬೀಳುವುದರಿಂದ ರಕ್ಷಿಸಲ್ಪಡಲಿ. ಇಂದು ಲೋಕಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಪ್ರಾರ್ಥನೆಗಳ ಆವಶ್ಯಕತೆ ಬಹಳ ಇದೆ. ಅಲ್ಲಾಹನು ಲೋಕಕ್ಕೆ ಬುದ್ಧಿ ನೀಡಲಿ. ಮುಸ್ಲಿಮ್ ಸಮುದಾಯಕ್ಕೆ ಬುದ್ಧಿ ನೀಡಲಿ. ಅಲ್ಲಾಹನು ಕಳುಹಿಸಿದ ಮಹಾನುಭಾವರನ್ನು ನಂಬದೆ ಅವರಿಗೆ ಬಾಳ್ವಿಕೆಯೂ ಇಲ್ಲ, ಮೋಕ್ಷವೂ ಇಲ್ಲ ಎಂಬ ಈ ವಾಸ್ತವಿಕಾಂಶವನ್ನು ಈ ಜನರು ಅರಿತುಕೊಳ್ಳುವಂತಾಗಲಿ. ಹೊಸವರ್ಷದಲ್ಲಿ ಪ್ರವೇಶಿಸುವಾಗ ಈ ವಿಷಯವನ್ನು ಅವರು ಮನವರಿಕೆ ಮಾಡಿಕೊಂಡು ಪ್ರವೇಶಿಸುವವರಾಗಲಿ. ಅಲ್ಲಾಹನು ಅವರಿಗೆ ವಿವೇಕ ದಯಪಾಲಿಸುವವನಾಗಲಿ.

ಪ್ರಾರ್ಥನೆಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉದ್ಧರಣೆಗಳನ್ನು ಈಗ ನಾನು ನೀಡುತ್ತೇನೆ. ಪ್ರಾರ್ಥನೆಯು ಅಂಗೀಕರಿಸಲ್ಪಡಲು ಆವಶ್ಯಕವಾದ ಒಂದು ತತ್ವವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹೃದಯವು ಶುದ್ಧವಾಗುವ ತನಕ ಪ್ರಾರ್ಥನೆ ಅಂಗೀಕರಿಸಲ್ಪಡುವುದಿಲ್ಲ. ಲೌಕಿಕ ವಿಷಯಕ್ಕೆ ಸಂಬಂಧಿಸಿ ಸಹ ನಿಮಗೆ ಒಬ್ಬನ ವಿರುದ್ಧ ದ್ವೇಷವಿದ್ದರೆ ನಿಮ್ಮ ಪ್ರಾರ್ಥನೆ ಅಂಗೀಕರಿಸಲ್ಪಡಲಾರದು. ನೀವು ಲೌಕಿಕ ಕಾರಣಗಳಿಂದ ಯಾರ ವಿರುದ್ಧವೂ ದ್ವೇಷಪಡಬಾರದು. ಲೋಕ ಮತ್ತು ಅದರ ಸಾಮಗ್ರಿಗಳಿಗೆ ಏನು ಸ್ಥಾನವಿದೆ? ಅದರ ಕಾರಣದಿಂದ ನೀವು ಯಾರನ್ನೂ ದ್ವೇಷಿಸಬಾರದು.

ಆದುದರಿಂದ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕರಿಸಲ್ಪಡುವಂತಾಗಲು ನೀವು ಎಲ್ಲ ವಿಧ ವೈಯ್ಯಕ್ತಿಕ ನೋವುಗಳನ್ನೂ ಮಾಲಿನ್ಯಗಳನ್ನೂ ಮರೆತುಬಿಡಬೇಕು. ಅಲ್ಲಾಹನ ಮುಂದೆ ಗೋಳಿಟ್ಟು ತನ್ನ ಪಾಪದೋಷಗಳಿಗೆ ಕ್ಷಮೆ ಯಾಚಿಸಬೇಕು. ಮುಂದೆ ತನ್ನ ಹೃದಯವನ್ನು ಪರಿಶುದ್ಧವಾಗಿರಿಸಲು ಅಲ್ಲಾಹನಿಂದ ಸಹಾಯವನ್ನು ಯಾಚಿಸಬೇಕು. ಇಂದಿನ ಕಾಲದಲ್ಲಿ ಅಹ್ಮದಿಯತ್ತಿನ ಶತ್ರುಗಳು ತಮ್ಮ ವಿರೋಧ ಕೃತ್ಯಗಳಲ್ಲಿ ಮುಂದುವರಿಯುತ್ತಾ ಇರುವಾಗ ನಾವೆಲ್ಲರೂ ಒಂದಾಗಿ ಅಲ್ಲಾಹನ ಸನ್ನಿಧಿಯಲ್ಲಿ ನಮ್ಮ ಪ್ರಾರ್ಥನೆಯೊಂದಿಗೆ ಹಾಜರಾಗಬೇಕು. ಮನುಷ್ಯನು ಆತಂಕಭರಿತನಾಗಿ ನಿಸ್ಸಹಾಯಕನಾಗಿ ಅಲ್ಲಾಹನ ಮುಂದೆ ಬಾಗುವಾಗ ಮತ್ತು ಅಲ್ಲಾಹನಿಂದ ಸಹಾಯ

ಬೇಡಿಕೊಳ್ಳುವಾಗ ಅಲ್ಲಾಹನು ಅವನಿಗೆ ಸಹಾಯ ಮಾಡಲು ಆಗಮಿಸುತ್ತಾನೆ. ನೀವು ಈ ಮೂಲ ತತ್ವವನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಮತ್ತು ಎಂದೂ ಅದರ ಬಗ್ಗೆ ನಿರ್ಲಕ್ಷ್ಯತೆ ತೋರಿಸಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ, ಅಲ್ಲಾಹನು ಬಹಳ ನಿರಪೇಕ್ಷನಾಗಿದ್ದಾನೆ. ಅವನೊಂದಿಗೆ ಅನೇಕ ಸಾರಿ ಪದೇ ಪದೇ ನಿಸ್ಸಹಾಯಕನಾಗಿ ಪ್ರಾರ್ಥನೆ ಮಾಡದಿದ್ದರೆ ಅವನು ಲಕ್ಷಿಸಲಾರನು. ನೋಡಿರಿ ಒಬ್ಬನ ಪತ್ನಿ ಅಥವಾ ಮಗು ರೋಗಬಾಧಿತವಾದರೆ ಅಥವಾ ಯಾರಾದರೂ ಕಠಿಣ ಮೊಕದ್ದಮೆಗೆ ಪಾತ್ರನಾದರೆ ಅವನು ಎಷ್ಟು ನಿಸ್ಸಹಾಯಕನಾಗಿ ಗಾಬರಿಗೊಳ್ಳುತ್ತಾನೆ. ಎಲ್ಲಾ ವಿಧಗಳ ನಿಸ್ಸಹಾಯ ಪರಿಸ್ಥಿತಿಗಳಲ್ಲಿ ಅಲ್ಲಾಹನು ಮಾತ್ರ ಪ್ರಯೋಜನಕರವಾಗುತ್ತಾನೆ. ಅವನು ಪ್ರಾರ್ಥನೆಗಳನ್ನು ಆಲಿಸಿ ತನ್ನ ದಾಸರಿಗೆ ಸಹಾಯ ನೀಡುತ್ತಾನೆ.

ನಾನು ಖಾದಿಯಾನಿನಲ್ಲಿರುವವರಿಗೆ ವಿಶಿಷ್ಟವಾಗಿ ಸಂಬೋಧಿಸಿ ಹೇಳುತ್ತೇನೆ, ಈಗ ವಿಶಿಷ್ಟ ಆಧ್ಯಾತ್ಮಿಕ ಪರಿಸರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಊರಿನಲ್ಲಿ ವಾಸಿಸುವವರು ಮತ್ತು ಅಲ್ಲಿ ಕೆಲವು ದಿನಗಳ ಕಾಲ ಕಳೆಯುವವರು ತಮ್ಮ ನಮಾಝ್‌ಗಳನ್ನು ಮತ್ತು ನಫ್ಲ್‌ಗಳನ್ನು ಎಂತಹ ಸ್ಥಿತಿಯಲ್ಲಿ ಅನುಷ್ಠಿಸಬೇಕೆಂದರೆ ನೀವು ಅಲ್ಲಾಹನ ಮುಂದೆ ನಿಮ್ಮ ನಿಸ್ಸಹಾಯಕ ಸ್ಥಿತಿಯನ್ನು ಸೂಚಿಸುತ್ತಾ ಇರಬೇಕು. ಸಾಮಾನ್ಯವಾಗಿ ಎಲ್ಲಾ ಜಮಾಅತ್‌ಗಳು ಸಹ ಇದರ ಬಗ್ಗೆ ಲಕ್ಷ್ಯನೀಡಬೇಕು. ಅನಾವಶ್ಯಕ ಮಾತುಗಳನ್ನಾಡದೆ ಹೆಚ್ಚಿನ ಸಮಯವನ್ನು ದುಆ ಮಾಡುತ್ತಾ, ಝಿಕ್ರ್ ಇಲಾಹಿ ಮಾಡುತ್ತಾ ಕಳೆಯಬೇಕು. ಆತಂಕದಿಂದ ಅಲ್ಲಾಹನ ಮುಂದೆ ಬಾಗಿರಿ. ಎಲ್ಲಿಯೆಲ್ಲಾ ಅಹ್ಮದಿಯರು ಕಷ್ಟಪಡುತ್ತಿರುವರೋ ಅಲ್ಲೆಲ್ಲಾ ಅಲ್ಲಾಹನು ತನ್ನ ಅನುಗ್ರಹದಿಂದ ಅವರ ಸ್ಥಿತಿಯನ್ನು ಉತ್ತಮಪಡಿಸಲಿ. ಅಲ್ಲಾಹನು ಶತ್ರುಗಳನ್ನು ಪರಾಜಿತರನ್ನಾಗಿ ಮಾಡಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಮುಂದೆ ಯಾರು ಅಳುತ್ತಾ ಪ್ರಾರ್ಥಿಸುತ್ತಾನೋ ಅಲ್ಲಾಹನ ಆಜ್ಞೆಗಳನ್ನು ಗೌರವ ಭಾವದಿಂದ ಕಾಣುತ್ತಾನೋ ಅವನು ಅಲ್ಲಾಹನ ಅನುಗ್ರಹದಿಂದ ನಿಶ್ಚಯವಾಗಿಯೂ ಪಾಲು ಪಡೆಯುವನು. ಆದುದರಿಂದ ನಮ್ಮ ಜಮಾಅತಿನವರು ತಹಜ್ಜುದ್ ನಮಾಝನ್ನು ಕಡ್ಡಾಯವಾಗಿ ಅನುಷ್ಠಿಸಬೇಕು. ಕನಿಷ್ಠ ಎರಡು ರಕಅತನ್ನಾದರೂ ಅನುಷ್ಠಿಸಿರಿ. ಯಾಕೆಂದರೆ ಆ ಮೂಲಕ ಪ್ರಾರ್ಥಿಸಲು ಸಂದರ್ಭ ಸಿಗುತ್ತದೆ. ಆ ಸಂದರ್ಭದ ಪ್ರಾರ್ಥನೆಗಳಲ್ಲಿ ವಿಶೇಷ ವೈಶಿಷ್ಟ್ಯವಿರುತ್ತದೆ. ಏಕೆಂದರೆ ಆಗ ಪ್ರಾರ್ಥನೆ ಸತ್ಯವಾದ ನೋವು ಮತ್ತು ಉತ್ಸಾಹಭರಿತವಾಗಿರುತ್ತದೆ. ಒಬ್ಬನಿಗೆ ಸತ್ಯವಾದ ನೋವು ಹೃದಯದಲ್ಲಿ ಇಲ್ಲವಾದರೆ ಅವನಿಗೆ ಸುಖಕರವಾದ ನಿದ್ರೆಯಿಂದ ಎದ್ದೇಳಲು ಹೇಗೆ ತಾನೆ ಸಾಧ್ಯ? ಆ ಸಮಯದಲ್ಲಿ ನಿದ್ರೆಯಿಂದ ಎದ್ದೇಳುವುದೇ ಹೃದಯದಲ್ಲಿ ವಿಶಿಷ್ಟ ನೋವನ್ನು ಹುಟ್ಟಿಸುತ್ತದೆ. ಯಾರಾದರೂ ನಿದ್ರೆಯಿಂದ ಎದ್ದೇಳಲು ನಿರ್ಲಕ್ಷಿಸುವುದಾದರೆ ಅವನ ಹೃದಯದಲ್ಲಿ ನೋವು ಮತ್ತು ಆಸಕ್ತಿ ಇಲ್ಲ ಎಂದು ತಿಳಿಯುತ್ತದೆ. ಏಕೆಂದರೆ ನಿದ್ರೆ ದುಃಖವನ್ನು ದೂರ ಸರಿಸುತ್ತದೆ. ಆದರೆ ನಿದ್ರೆಯಿಂದ ಏಳುವುದಾದರೆ ತಿಳಿದು ಬರುವುದೇನೆಂದರೆ ಅವನಿಗೆ ಎಂತಹ ನೋವು ಇದೆ ಎಂದರೆ ಅದು ನಿದ್ರೆಯಿಂದ ದೂರ ಸರಿಸಲ್ಪಡುವ ನೋವಿಗಿಂತ ಹೆಚ್ಚಿನ ಮಟ್ಟದ್ದಾಗಿದೆ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇನ್ನೊಂದು ಮುಖ್ಯ ವಿಷಯವಿದೆ. ನಮ್ಮ ಜಮಾಅತಿನ ಜನರು ತಮ್ಮ ನಾಲಗೆಯನ್ನು ನಿಷ್ಪ್ರಯೋಜಕ ಮಾತುಗಳಿಂದ ಮುಕ್ತವನ್ನಾಗಿ ಮಾಡಿ ಪರಿಶುದ್ಧಗೊಳಿಸಬೇಕು. ನಾಲಗೆ ಎಂಬುದು ಮನುಷ್ಯನ ಅಸ್ತಿತ್ವದ ಹೊಸ್ತಿಲು ಆಗಿದೆ. ಹೊಸ್ತಿಲನ್ನು ಸ್ವಚ್ಛವಾಗಿಟ್ಟರೆ ಅಲ್ಲಾಹನು ಮನುಷ್ಯನ ಅಸ್ತಿತ್ವದ ಹೊಸ್ತಿಲಿಗೆ ಆಗಮಿಸುತ್ತಾನೆ. ಅಲ್ಲಾಹನು ಅಲ್ಲಿಗೆ ಬಂದರೆ ಒಳಗೆ ಬರುವುದರಲ್ಲಿ ಆಶ್ಚರ್ಯವೇನಿದೆ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್ ಇವುಗಳನ್ನು ಈಡೇರಿಸುವುದರಲ್ಲಿ ಪ್ರಜ್ಞಾಪೂರ್ವಕವಾಗಿ ನಿರ್ಲಕ್ಷ್ಯತೆ ತೋರಿಸಬಾರದು. ಯಾರು ಈ ವಿಷಯಗಳಿಗೆ ಲಕ್ಷ್ಯನೀಡಿ ಪ್ರಾರ್ಥನೆ ಮಾಡುತ್ತಾನೋ ಅವನಿಗೆ ಅಲ್ಲಾಹನು ಅನುಗ್ರಹ ನೀಡುವನು ಎಂದು ನಾವು ದೃಢವಾಗಿ ನಂಬುತ್ತೇವೆ. ಅವನು ರಕ್ಷಿಸಲ್ಪಡುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪಾಪ ಒಂದು ವಿಷವಾಗಿದೆ. ಅದು ಮನುಷ್ಯನನ್ನು ನಾಶ ಮಾಡುತ್ತದೆ. ಅದು ಅಲ್ಲಾಹನ ಕೋಪವನ್ನು ಉತ್ತೇಜಿಸುತ್ತದೆ. ಅಲ್ಲಾಹನ ಬಗ್ಗೆ ಭಯ ಮತ್ತು ಪ್ರೀತಿ ಮನುಷ್ಯನನ್ನು ಪಾಪದಿಂದ ದೂರ ಸರಿಸುತ್ತದೆ. ಆದುದರಿಂದ ನೀವು ನಿರಂತರವಾಗಿ ಪ್ರಾರ್ಥಿಸುತ್ತಾ ಇರಬೇಕು. ತೌಬ ಮತ್ತು ಇಸ್ತಿಗ್‌ಫಾರ್ ಮಾಡಬೇಕು. ಹೃದಯ ಅಲ್ಲಾಹನ ಮುಂದೆ ಕರಗಿ ಹೋಗುವಂತೆ ಮಾಡುವ ಪ್ರಾರ್ಥನೆ ಮಾತ್ರ ಪ್ರಯೋಜನಕರವಾಗುತ್ತದೆ. ಅಲ್ಲಾಹನ ಹೊರತು ಬೇರೆ ಆಶ್ರಯಸ್ಥಾನ ಆಗ ಕಾಣಿಸಲಾರದು. ಯಾರು ಅಲ್ಲಾಹನ ಕಡೆಗೆ ಓಡುತ್ತಾನೋ ನಿಸ್ಸಹಾಯಕನಾಗಿ ಆಶ್ರಯ ಬೇಡುತ್ತಾನೋ ಅವನು ಕೊನೆಗೆ ರಕ್ಷಿಸಲ್ಪಡುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಯಾವುದೇ ಕಷ್ಟಕ್ಕೆ ಪಾತ್ರನಾಗದಿದ್ದರೂ ಪ್ರಾರ್ಥಿಸುತ್ತಾ ಇರಬೇಕು. ಏಕೆಂದರೆ ಅಲ್ಲಾಹನ ನಿರ್ಧಾರವೇನೆಂದು ಅವನಿಗೆ ತಿಳಿದಿರುವುದಿಲ್ಲ. ನಾಳೆ ಏನಾಗಲಿದೆ ಎಂದು ಸಹ ಅವನಿಗೆ ತಿಳಿಯಲು ಸಾಧ್ಯವಿಲ್ಲ. ಆದುದರಿಂದ ಮೊದಲಿನಿಂದಲೇ ಪ್ರಾರ್ಥಿಸುತ್ತಾ ಇದ್ದರೆ ರಕ್ಷಿಸಲ್ಪಡುವಿರಿ. ಕೆಲವು ಸಾರಿ ವಿಪತ್ತು ಹೇಗೆ ಬರುತ್ತದೆ ಎಂದರೆ ಪ್ರಾರ್ಥನೆ ಮಾಡಲು ಸಮಯ ಇರುವುದಿಲ್ಲ. ಮೊದಲೇ ಪ್ರಾರ್ಥನೆ ಮಾಡುತ್ತಾ ಇದ್ದರೆ ವಿಪತ್ತಿನ ಕಾಲದಲ್ಲಿ ಪ್ರಯೋಜನಕರವಾಗುವುದು.

ಪವಿತ್ರ ಖುರ್‌ಆನಿನ ಪ್ರಾರಂಭದಲ್ಲಿ ಪ್ರಾರ್ಥನೆ ಇದೆ, ಅದರ ಕೊನೆಯ ಭಾಗದಲ್ಲಿಯೂ ಪ್ರಾರ್ಥನೆ ಇದೆ ಎಂದು ವಿವರಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್

ಹೇಳುತ್ತಾರೆ: ಪವಿತ್ರ ಖುರ್‌ಆನಿನ ಪ್ರಾರಂಭದಲ್ಲಿ ಪ್ರಾರ್ಥನೆ ಇದೆ. ಪವಿತ್ರ ಖುರ್‌ಆನಿನ ಕೊನೆಗೆ ಸಹ ಪ್ರಾರ್ಥನೆ ಇದೆ. ಸೂರತುಲ್ ಫಾತಿಹ ದುಆ ಆಗಿದೆ. ಸೂರತುನ್ನಾಸ್ ಸಹ ದುಆ ಆಗಿದೆ. ಇದು ಸೂಚಿಸುವುದೇನೆಂದರೆ ಮನುಷ್ಯನು ಎಷ್ಟು ಬಲಹೀನನಾಗಿದ್ದಾನೆಂದರೆ ಅಲ್ಲಾಹನ ಅನುಗ್ರಹವಿಲ್ಲದೆ ಪರಿಶುದ್ಧನಾಗಲಾರನು. ಅಲ್ಲಾಹನಿಂದ ಸಹಾಯ ದೊರಕದೆ ಮನುಷ್ಯನು ಪ್ರಗತಿಗಳಿಸಲಾರನು. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಅಲ್ಲಾಹನು ಜೀವಂತಗೊಳಿಸಿದವರ ಹೊರತು ಎಲ್ಲರೂ ಮೃತರೇ ಆಗಿದ್ದಾರೆ. ಅಲ್ಲಾಹನು ಮಾರ್ಗದರ್ಶನ ನೀಡಿದವರ ಹೊರತು ಎಲ್ಲರೂ ಪಥಭ್ರಷ್ಟರಾಗಿದ್ದಾರೆ. ಅಲ್ಲಾಹನು ದೃಷ್ಟಿ ನೀಡಿದವರ ಹೊರತು ಎಲ್ಲರೂ ಅಂಧರಾಗಿದ್ದಾರೆ. ಅಲ್ಲಾಹನ ಅನುಗ್ರಹ ದೊರಕುವ ತನಕ ಲೌಕಿಕ ಪ್ರೀತಿ ಎಂಬ ನೊಗ ಕೊರಳಿನ ಕುಣಿಕೆಯಾಗಿರುತ್ತದೆ. ಅಲ್ಲಾಹನು ಯಾರಿಗೆ ಅನುಗ್ರಹ ನೀಡುತ್ತಾನೋ ಅವರೇ ಅದರಿಂದ ಬಿಡುಗಡೆ ಪಡೆಯುತ್ತಾರೆ. ಅಲ್ಲಾಹನ ಅನುಗ್ರಹ ಸಹ ಪ್ರಾರ್ಥನೆ ಮೂಲಕವೇ ಪ್ರಾರಂಭವಾಗುತ್ತದೆ. ಅದಕ್ಕೋಸ್ಕರ ಸಹ ಪ್ರಾರ್ಥಿಸಬೇಕಾಗಿದೆ.

ಪ್ರಾರ್ಥನೆ ಅಂಗೀಕಾರವಾಗಲು ಆವಶ್ಯಕವಾಗಿರುವುದೇನೆಂದರೆ ಮನುಷ್ಯನು ಪ್ರತಿದಿನ ಒಳಿತುಗಳಲ್ಲಿ ಅಭಿವೃದ್ಧಿ ಗಳಿಸುತ್ತಾ ಇರಬೇಕು. ಯಾರು ಒಳಿತುಗಳನ್ನು ಮಾಡಲು ಮುಂದಕ್ಕೆ ಹೆಜ್ಜೆ ಹಾಕುತ್ತಾ ಇರುತ್ತಾರೆಯೋ ಮತ್ತು ಒಂದು ಸ್ಥಳದಲ್ಲೇ ನಿಂತು ಬಿಡುವುದಿಲ್ಲವೋ ಅಂತಹ ಜನರ ಅಂತಿಮಗತಿ ಉತ್ತಮವಾಗಿರುತ್ತದೆ. ನಾವು ಕೆಲವರನ್ನು ನೋಡಿದ್ದೇವೆ. ಅವರಲ್ಲಿ ಬಹಳ ಉತ್ಸಾಹ, ಆವೇಶ, ಪ್ರಾರ್ಥನೆಯಲ್ಲಿ ಅಳಲು ಮೊದಲಾದವು ಇದ್ದವು. ಆದರೆ ಅವರು ಮುಂದೆ ಸಾಗಿ ನಿಂತುಬಿಡುತ್ತಾರೆ. ಅಂತಹ ಜನರ ಅಂತಿಮಗತಿ ಉತ್ತಮವಾಗಿರುವುದಿಲ್ಲ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಾರ್ಥಿಸಲು ಕಲಿಸಿದ್ದಾನೆ. **ಅಸ್‌ಲಿಹ್‌ಲೀ ಫೀ ದು಼ರ್ರಿಯತೀ.** ನನ್ನ ಪತ್ನಿ ಮತ್ತು ಮಕ್ಕಳನ್ನು ಸುಧಾರಣೆ ಮಾಡು ಎಂದು. ಒಬ್ಬನು ತನ್ನನ್ನು ಪರಿಶುದ್ಧವಾಗಿ ಬದಲಾಯಿಸುವುದರೊಂದಿಗೆ ತನ್ನ ಮಕ್ಕಳಿಗೋಸ್ಕರ ಮತ್ತು ಪತ್ನಿಗೋಸ್ಕರ ಸಹ ಪ್ರಾರ್ಥಿಸುತ್ತಾ ಇರಬೇಕು. ಏಕೆಂದರೆ ಬಹುತೇಕ ಪರೀಕ್ಷೆಗಳು ಮಕ್ಕಳ ಕಾರಣದಿಂದ ಅಥವಾ ಪತ್ನಿಯ ಕಾರಣದಿಂದ ಸಂಭವಿಸುತ್ತದೆ. ಅವರ ಸುಧಾರಣೆಗೆ ಪೂರ್ಣ ಲಕ್ಷ್ಯ ನೀಡಬೇಕು. ಅವರಿಗೋಸ್ಕರ ಪ್ರಾರ್ಥಿಸುತ್ತಾ ಇರಬೇಕು. ನಿಮಗಿರುವ ನಮ್ಮ ಉಪದೇಶ, ನೀವು ನಿಮ್ಮನ್ನು ಒಳ್ಳೆಯ ಮಾದರಿಯನ್ನಾಗಿ ಮಾಡಲು ಪ್ರಯತ್ನ ಮಾಡುತ್ತಾ ಇರಬೇಕು ಎಂಬುದಾಗಿದೆ. ಮಲಕ್‌ಗಳ ಹಾಗಿರುವ ಜೀವಿತ ನಡೆಸದಿದ್ದರೆ ಯಾರ ಬಗ್ಗೆಯಾದರೂ ಪರಿಶುದ್ಧನೆಂದು ಹೇಳಲು ಹೇಗೆ ತಾನೆ ಸಾಧ್ಯ?

ಬಳಲದೆ ಪ್ರಾರ್ಥನೆ ಮಾಡುತ್ತಾ ಇರುವ ಕೈದಿ ಭಾಗ್ಯಶಾಲಿಯಾಗಿದ್ದಾನೆ. ಏಕೆಂದರೆ ಒಂದು ದಿನ ಅವನು ಬಿಡುಗಡೆ ಹೊಂದುವನು. ಪ್ರಾರ್ಥನೆ ಮಾಡುವ ಬಗ್ಗೆ ಉದಾಸೀನತೆ ತೋರಿಸದ ಅಂಧರು ಭಾಗ್ಯಶಾಲಿಗಳು ಏಕೆಂದರೆ ಅವರು ಮುಂದೆ ಒಂದು ದಿನ ದೃಷ್ಟಿಯನ್ನು ಪಡೆಯುವರು. ಗೋರಿಯಲ್ಲಿ ಬಿದ್ದು ಅಲ್ಲಾಹನ ಸಹಾಯ ಯಾಚಿಸುವವರು ಭಾಗ್ಯಶಾಲಿಗಳು. ಅವರು ಮುಂದೆ ಒಂದು ದಿನ ಗೋರಿಯಿಂದ ಹೊರಗೆ ಹಾಕಲ್ಪಡುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಗಮನ ಸೆಳೆಯುತ್ತಾ ಮತ್ತೂ ಹೇಳುತ್ತಾರೆ: ನೀವು ಪ್ರಾರ್ಥನೆ ಮಾಡುವಾಗ ನಿರ್ಲಕ್ಷ್ಯತೆ ಹೊಂದದಿದ್ದರೆ, ನೀವು ಬಳಲಿ ಹೋಗದಿದ್ದರೆ, ನೀವು ಉದಾಸೀನರಾಗದಿದ್ದರೆ, ನಿಮ್ಮ ಆತ್ಮ ಪ್ರಾರ್ಥನೆಗೋಸ್ಕರ ಕರಗುವುದಾದರೆ, ನಿಮ್ಮ ಕಣ್ಣುಗಳು ಕಣ್ಣೀರನ್ನು ಸುರಿಸುವುದಾದರೆ, ನಿಮ್ಮ ಎದೆಯಲ್ಲಿ ಒಂದು ಅಗ್ನಿ ಹುಟ್ಟುವುದಾದರೆ, ನೀವು ಏಕಾಂತವನ್ನು ಬಯಸಿ ಅಂಧಕಾರಮಯ ಕೋಣೆಗಳಿಗೋ ನಿಶ್ಶಬ್ದ ಕಾಡುಗುಡ್ಡಗಳಿಗೋ ಹೋಗುವುದಾದರೆ ನೀವು ಉನ್ಮತ್ತರ ಹಾಗೆಯೂ ತನ್ನ ಬಗ್ಗೆ ಪರಿವೆ ಇಲ್ಲದವರೂ ಆಗುವುದಾದರೆ ನೀವು ಭಾಗ್ಯಶಾಲಿಗಳಾಗುವಿರಿ. ಏಕೆಂದರೆ ಕೊನೆಗೆ ನಿಮ್ಮ ಮೇಲೆ ಅನುಗ್ರಹ ಸುರಿಸಲ್ಪಡುವುದು. ನಾವು ಯಾವ ದೇವನ ಕಡೆಗೆ ನಿಮ್ಮನ್ನು ಆಮಂತ್ರಿಸುತ್ತಾ ಇದ್ದೇವೆಯೋ ಅವನು ಅತ್ಯಂತ ಕೃಪಾಳುವೂ, ಕಾರುಣ್ಯವಂತನೂ ಲಜ್ಜೆಯುಳ್ಳವನೂ ಸತ್ಯವಂತನೂ ಆಗಿದ್ದಾನೆ. ಅವನು ನಿಷ್ಠಾವಂತರಾದ ವಿನಯಶಾಲಿಗಳಿಗೆ ದಯೆದೋರುವವನಾಗಿದ್ದಾನೆ. ಆದುದರಿಂದ ನೀವು ನಿಷ್ಠಾವಂತರಾಗಿರಿ. ಪೂರ್ಣವಾದ ಸತ್ಯ ಮತ್ತು ನಿಷ್ಠೆಯಿಂದ ಪ್ರಾರ್ಥಿಸಿರಿ. ಅವನು ನಿಮ್ಮ ಮೇಲೆ ದಯೆದೋರುವನು. ಲೋಕದ ಗೊಂದಲಗಳಿಂದ ದೂರಸರಿಯಿರಿ. ಕಲಹಗಳಿಗೆ ಧರ್ಮದಲ್ಲಿ ಸ್ಥಾನ ನೀಡಬೇಡಿರಿ. ಅಲ್ಲಾಹನಿಗೋಸ್ಕರ ಸೋಲನ್ನು ಅಂಗೀಕರಿಸಿರಿ. ಆ ಮೂಲಕ ನೀವು ದೊಡ್ಡ ದೊಡ್ಡ ಜಯಗಳಿಗೆ ವಾರೀಸುದಾರರಾಗುವಿರಿ. ಪ್ರಾರ್ಥಿಸುವವರಿಗೆ ಅಲ್ಲಾಹನು ಅದ್ಭುತವನ್ನು ತೋರಿಸುವನು. ಬೇಡಿಕೊಳ್ಳುವವರಿಗೆ ಅಸಾಧಾರಣ ಅನುಗ್ರಹ ದೊರಕುವುದು. ದುಆ ಅಲ್ಲಾಹನಿಂದಲೇ ಬರುತ್ತದೆ ಮತ್ತು ಅವನ ಕಡೆಗೆಯೇ ಮರಳಿ ಹೋಗುತ್ತದೆ. ಪ್ರಾರ್ಥನೆಯಿಂದ ಅಲ್ಲಾಹನು ಎಷ್ಟು ಸಮೀಪವಾಗುತ್ತಾನೆಂದರೆ ನಿಮ್ಮ ಪ್ರಾಣ ನಿಮ್ಮ ಸಮೀಪವಿರುವ ಹಾಗೆ. ಪ್ರಾರ್ಥನೆಯ ಪ್ರಥಮ ಅನುಗ್ರಹ ಏನೆಂದರೆ ಮನುಷ್ಯನಲ್ಲಿ ಪರಿಶುದ್ಧ ಬದಲಾವಣೆ ಉಂಟಾಗುತ್ತದೆ.

ಯಾವ ಆಯುಧವನ್ನು ಅಲ್ಲಾಹನು ಧರ್ಮದ ಅಭಿವೃದ್ಧಿಗೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೀಡಿದ್ದನೋ ಅದೇ ಆಯುಧವನ್ನು ಅವರನ್ನು ನಂಬುವವರು ಸಹ ಉಪಯೋಗಿಸಬೇಕು. ಇದೇ ಆಯುಧ – ಇನ್‌ಶಾಅಲ್ಲಾಹ್ – ಕಷ್ಟಗಳಿಂದ ಅಲ್ಲಾಹನು ನಮ್ಮನ್ನು ಹೊರಗೆ ಹಾಕುವಂತೆ ಮಾಡುವುದು ಮತ್ತು ಶತ್ರುಗಳನ್ನು ಪರಾಜಿತರನ್ನಾಗಿ ಮಾಡುವುದು. ಆದುದರಿಂದ ಅದರ ಕಡೆಗೆ ಪ್ರತಿಯೊಬ್ಬ ಅಹ್ಮದಿ ಗಮನ ಹರಿಸುವುದು ಆವಶ್ಯಕವಾಗಿದೆ. ಕೊನೆಯದಾಗಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮುಸ್ಲಿಮ್ ಸಮುದಾಯಕ್ಕೋಸ್ಕರ ಬೇಡಿಕೊಂಡ ಒಂದು ಪ್ರಾರ್ಥನೆಯನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೀಗೆ ಪ್ರಾರ್ಥಿಸಿದರು:

**ಓ ನನ್ನ ಪ್ರಭು, ನನ್ನ ಸಮುದಾಯದ ಬಗ್ಗೆ ನನ್ನ ಪ್ರಾರ್ಥನೆ ಮತ್ತು ನನ್ನ ಸಹೋದರರ ಬಗ್ಗೆ ನನ್ನ ಮೊರೆಯನ್ನು ಆಲಿಸು. ನಿನ್ನ ಪ್ರವಾದಿ ಖಾತಮುನ್ನಬಿಯ್ಯೀನ್**

**ಮತ್ತು ಯಾರ ಶಿಫಾರಸು ನಿನ್ನಿಂದ ಅಂಗೀಕರಿಸಲ್ಪಡುವುದೋ ಅವರ ಮೂಲಕ ನಾನು ನಿನ್ನೊಂದಿಗೆ ವಿನಂತಿಸಿಕೊಳ್ಳುತ್ತೇನೆ. ಓ ನನ್ನ ಪ್ರಭು, ಅವರನ್ನು ಅಂಧಕಾರದಿಂದ ಪ್ರಕಾಶದ ಕಡೆ ಒಯ್ಯು. ನನ್ನ ಮೇಲೆ ಶಾಪ ಹಾಕುವ ಮತ್ತು ನನ್ನ ಕೈ ಕಡಿಯುವವರ ಮೇಲೆ ದಯೆದೋರು. ಅವರನ್ನು ನಾಶದಿಂದ ರಕ್ಷಿಸು ಮತ್ತು ನಿನ್ನ ಮಾರ್ಗದರ್ಶನವನ್ನು ಅವರ ಹೃದಯಗಳಿಗೆ ಪ್ರವೇಶಿಸುವಂತೆ ಮಾಡು. ಅವರ ತಪ್ಪುಗಳನ್ನೂ ಪಾಪಗಳನ್ನೂ ಕಡೆಗಣಿಸು. ಅವರಿಗೆ ಕ್ಷಮೆಯನ್ನು ನೀಡು. ಅವರಿಗೆ ಆರೋಗ್ಯವನ್ನು ಕರುಣಿಸು. ಅವರನ್ನು ಸುಧಾರಣೆ ಮಾಡು. ಅವರನ್ನು ಶುದ್ಧೀಕರಿಸು. ಅವರಿಗೆ ಕಣ್ಣುಗಳನ್ನು ನೀಡು, ಅದರಿಂದ ಅವರು ನೋಡುವಂತಾಗಲಿ. ಅವರಿಗೆ ಎಂತಹ ಕಿವಿ ನೀಡಬೇಕೆಂದರೆ ಅದರಿಂದ ಅವರು ಆಲಿಸುವಂತಾಗಲಿ. ಅವರಿಗೆ ಎಂತಹ ಹೃದಯ ನೀಡಬೇಕೆಂದರೆ ಅವರು ಮನವರಿಕೆ ಮಾಡಿಕೊಳ್ಳುವಂತಾಗಲಿ. ಅವರಿಗೆ ಅರಿವು ಲಭಿಸುವಂತಹ ಪ್ರಕಾಶವನ್ನು ನೀಡು. ಅವರ ಮೇಲೆ ದಯೆದೋರು. ಅವರು ಹೇಳುವುದನ್ನೆಲ್ಲಾ ಕಡೆಗಣಿಸು. ಏಕೆಂದರೆ ಅವರು ತಿಳುವಳಿಕೆ ಇಲ್ಲದ ಜನರಾಗಿದ್ದಾರೆ.**

**ಓ ನನ್ನ ಪ್ರಭು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಅವರ ಉನ್ನತ ಪದವಿಯ ಸದಖದಿಂದ, ರಾತ್ರಿ ಪ್ರಾರ್ಥಿಸುತ್ತಾ ಇದ್ದು ಹಗಲು ಹೋರಾಡುತ್ತಾ ಇರುವವರ ಸದಖದಿಂದ, ರಾತ್ರಿಹೊತ್ತು ವೇಗವಾಗಿ ಓಡುವ ಸವಾರಿಮೃಗಗಳ ಸದಖದಿಂದ, ಮಕ್ಕದ ಕಡೆಗೆ ಮಾಡುವ ಯಾತ್ರೆಯ ಸದಖದಿಂದ, ನಮ್ಮ ಮತ್ತು ನಮ್ಮ ಸಹೋದರರ ಮಧ್ಯೆ ರಾಜಿಸಂಧಾನದ ವ್ಯವಸ್ಥೆಯನ್ನು ಮಾಡು. ಅವರ ಕಣ್ಣುಗಳನ್ನು ತೆರೆ. ಅವರ ಹೃದಯಗಳನ್ನು ಪ್ರಕಾಶಗೊಳಿಸು. ನೀನು ನನಗೆ ಮನವರಿಕೆ ಮಾಡಿಕೊಟ್ಟದ್ದನ್ನು ಅವರಿಗೂ ಮನವರಿಕೆಯಾಗುವಂತೆ ಮಾಡು. ಅವರಿಗೆ ತಕ್ಕುದ ರೀತಿಗಳನ್ನು ಕಲಿಸು. ಇಷ್ಟರವರೆಗೆ ಸಂಭವಿಸಿರುವುದನ್ನು ಕಡೆಗಣಿಸಿ ಬಿಡು. ಉನ್ನತ ಆಕಾಶಗಳ ಪ್ರಭುವಾದ ಅಲ್ಲಾಹನಿಗೆ ಎಲ್ಲಾ ಸ್ತುತಿಗಳು ಸಲ್ಲುತ್ತವೆ ಎಂಬುದೇ ನಮ್ಮ ಕೊನೆಯ ಪ್ರಾರ್ಥನೆಯಾಗಿದೆ – ಆಮೀನ್.**

ಅಲ್ಲಾಹನು ಮುಸ್ಲಿಮ್ ಸಮುದಾಯದ ಕಣ್ಣುಗಳನ್ನು ತೆರೆಯಲಿ. ಅಲ್ಲಾಹನು ಯಾರನ್ನು ಕಳುಹಿಸಿರುವನೋ ಅವರನ್ನು ವಿರೋಧಿಸುವುದನ್ನು ಬಿಟ್ಟು ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ ಅವರ ಸಹಾಯಕರಾಗುವಂತಾಗಲಿ. ಅಲ್ಲಾಹನು ನಮ್ಮನ್ನು ಸಹ ಪ್ರಾರ್ಥನೆಗಳ ಹಕ್ಕು ಈಡೇರಿಸುವವರನ್ನಾಗಿ ಮಾಡಲಿ. ವಿಶಿಷ್ಟವಾಗಿ ಖಾದಿಯಾನಿನಲ್ಲಿ ಜಲ್ಸದಲ್ಲಿ ಭಾಗವಹಿಸುವವರು ಪ್ರಾರ್ಥನೆ ಬಗ್ಗೆ ಹೆಚ್ಚು ಲಕ್ಷ್ಯ ನೀಡಬೇಕು. ಈ ಜಲ್ಸದಲ್ಲಿ ಭಾಗವಹಿಸಿದುದು ತಮ್ಮಲ್ಲಿ ಒಂದು ಕ್ರಾಂತಿದಾಯಕ ಬದಲಾವಣೆ ತರುವಂತಾಗಲಿ. ಅಲ್ಲಾಹನು ನಮಗೆಲ್ಲರಿಗೂ ಹೀಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 29-12-2017.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon